ದಿನಾಂಕ **19-06-2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಟಿ.ವಿ.ವಿ. ಆರೋಪಿ ಪರ ವಕೀಲರಿಂದಃ-**

1. ನಾನು ಬಿ.ಕಾಂ ಮಾಡಿರುತ್ತೇನೆ. ನ್ಯಾಯಾಲಯಕ್ಕೆ ಕೇಸಿನ ವಿಚಾರವಾಗಿ ನಾನು 2019 ರಂದು ಬರುತ್ತಿದ್ದೇನೆ. ಒಂದು ಕೇಸಿನಲ್ಲಿ ಸಾಕ್ಷಿ ವಿಚಾರಣೆಗೆ ಬಂದಿರುತ್ತೇನೆ ಅದು ನಮ್ಮ ದೊಡ್ಡಪ್ಪ ನವರ ಕೇಸಿನಲ್ಲಿ ಬಂದಿರುತ್ತೇನೆ. ನಮ್ಮ ದೊಡ್ಡಪ್ಪನವರ ಕೇಸು ಹಣಕಾಸಿನ ವ್ಯವಹಾರದ್ದು ಆಗಿರುತ್ತದೆ. ನಮ್ಮ ದೊಡ್ಡಪ್ಪನವರ ಹೆಸರು ಕೃಷ್ಣಾರೆಡ್ಡಿ ಎಂದರೆ ಸರಿ. ನನ್ನ ದೊಡ್ಡಪ್ಪನಿಗೆ ಮತ್ತು ಆರೋಪಿಗೆ ಹಣಕಾಸಿನ ವ್ಯವಹಾರ ನಡೆಯುತ್ತಿತ್ತು ಎಂದರೆ ಸರಿ. ಹಿರಿಯ ಸಿಜೆ ನ್ಯಾಯಾಲಯದಲ್ಲಿ ನನ್ನ ದೊಡ್ಡಪ್ಪ ಆರೋಪಿಯ ಮೇಲೆ ಕೇಸು ಹಾಕಿದ್ದಾರೆ ಎಂದರೆ ಜಮೀನಿನ ವಿಚಾರವಾಗಿ ಕೇಸು ಹಾಕಿರುತ್ತಾರೆ ಎನ್ನುತ್ತಾರೆ. ಕೃಷ್ಣಾರೆಡ್ಡಿ ಮತ್ತು ಆರೋಪಿಯ ನಡುವೆ ಯಾವಾಗಿನಿಂದ ಹಣಕಾಸಿನ ವ್ಯವಹಾರ ಇದೆ ಎಂದರೆ ಕ್ರಯ ಕರಾರು ಆದಾಗಿನಿಂದ ಇರುತ್ತದೆ ಎನ್ನುತ್ತಾರೆ. ಯಾವ ವರ್ಷದಿಂದ ವ್ಯವಹಾರ ನಡೆಯುತ್ತಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಕೃಷ್ಣಾರೆಡ್ಡಿ ಮತ್ತು ಆರೋಪಿ ನಡುವೆ ಹಣ ಕೊಡುವಾಗ ನಾನು ಅಲ್ಲೆ ಇದ್ದೆ ಎಂದರೆ ಸರಿ. ಎಷ್ಟು ದುಡ್ಡು ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ದುಡ್ಡು ಕೊಟ್ಟಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನಾನು ಆರೋಪಿಯ ಜೊತೆ ಮಾತಾನಾಡಿದ್ದೇನೆ ಎಂದರೆ ಸರಿ.

2. ನನ್ನ ತಾಯಿ ಮತ್ತು ಆರೋಪಿ ಮಿನಿ ಬಸ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಬಸ್ಸು ನಡೆಸುತ್ತಿದ್ದರು ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ತಾಯಿ ಮತ್ತು ಆರೋಪಿ ಮಿನಿ ಬಸ್ಸು ನಡೆಸುತ್ತಿದ್ದರು ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ತಾಯಿ ಮತ್ತು ಆರೋಪಿ ಜಗಳವಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು

ಮುಂದುವರೆದು ಅವರಿಬ್ಬರೂ ಮಾತನಾಡುತ್ತಿದ್ದರು ಎನ್ನುತ್ತಾರೆ. 2015 ರಿಂದ ನಾನು ಮತ್ತು ಆರೋಪಿ ಇವತ್ತಿನವರೆಗೂ ಮಾತನಾಡುತ್ತಿಲ್ಲ ಎಂದರೆ ಸಾಕ್ಷಿಯು ಈ ಕೇಸು ಹಾಕುವ ತನಕ ಮಾತನಾಡುತ್ತಿದ್ದೇವು. ಕೇಸು ಹಾಕಿದ ನಂತರ ಅಂದಾಜು ಎಷ್ಟು ಸಲ ಮಾತನಾಡಿದೇವು ಎಂದರೆ ಸಾಕ್ಷಿಯು 4-5 ಸಲ ಮಾತನಾಡಿರುತ್ತೇವೆ ಎನ್ನುತ್ತಾರೆ. ನಾನು ಕಳುಹಿಸಿದ ಕಾನೂನು ಬದ್ಧ ನೋಟೀಸಿನಲ್ಲಿ ಸದರಿ ವಿಚಾರವನ್ನು ಬರೆಯಿಸಿಲ್ಲ ಎಂದರೆ ಸರಿ.

3. ಆರೊಪಿಯ ಗಂಡನ ಹೆಸರು ಜಯರಾಮರೆಡ್ಡಿ ಎಂದರೆ ಸರಿ. ಸಾಕ್ಷಿಗೆ ನಿಪಿ 3 ನ್ನು ತೋರಿಸಲಾಗಿ ಅದರಲ್ಲಿ ಆರೋಪಿಯ ಗಂಡನ ಹೆಸರು ನಮೂದಿಸಿಲ್ಲ ಎಂದರೆ ಸರಿ. ನ್ಯಾಯಾಲಯಕ್ಕೆ ಸಲ್ಲಿಸಿದ ದೂರಿನ ಅರ್ಜಿಯಲ್ಲಿ ಸಹ ಆರೋಪಿಯ ಗಂಡನ ಹೆಸರು ನಮೂದಿಸಿಲ್ಲ ಎಂದರೆ ಸರಿ. ಅರೋಪಿಯ ಹತ್ತಿರ ಮೊಬೈಲ್ ಇದೆ ಎಂದರೆ ಸರಿ. ನನ್ನ ಹತ್ತಿರ ಆರೋಪಿಯ ನಂಬರ್ ಇದೆ ಎಂದರೆ ಸರಿ. ನೋಟೀಸು ಕೊಡುವ ಕಾಲಕ್ಕೆ ನಾನು ಆರೋಪಿ ಗಂಡ ಜಯರಾಮರೆಡ್ಡಿ ಎಂದು ನನ್ನ ವಕೀಲರಿಗೆ ಹೇಳಿಲ್ಲ ಎಂದರೆ ಸಾಕ್ಷಿಯು ಇಲ್ಲ ನಾನು ಆರೋಪಿಯ ತಾಯಿಯ ಹೆಸರನ್ನು ನೀಡಿರುತ್ತೇನೆ ಎಂದು ಹೇಳಿರುತ್ತಾರೆ. ನೋಟೀಸು ಕೊಡು ಸಮಯದಲ್ಲಿ ನನ್ನ ವಕೀಲರಿಗೆ ಆರೋಪಿಯ ಮೊಬೈಲ್ ನಂಬರ್ ನ್ನು ತಿಳಿಸಿಲ್ಲ ಎಂದರೆ ಸರಿ. ಆರೋಪಿ ಗಂಡ ಜಯರಾಮರೆಡ್ಡಿ ಎಂದು ನೋಟೀಸು ಕಳುಹಿಸಿದರೆ ಆರೋಪಿದಯ ವಿಳಾಸಕ್ಕೆ ಹೋಗುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಇವತ್ತಿಗೂ ದೊಡ್ಡಗಂಜೂರುನಲ್ಲಿ ವಾಸ ಇರುವುದು ಎಂದರೆ ಸರಿ. ಆರೋಪಿಯ ಆಧಾರ್ ಕಾರ್ಡ್ ಗುರುತಿನ ಚೀಟಿ ಮತ್ತು ರೇಷನ್ ಕಾರ್ಡ್ ನಲ್ಲಿ ಇವತ್ತಿಗೂ ಆರೋಪಿ ಗಂಡ ಜಯರಾಮರೆಡ್ಡಿ ಎಂದು ಇರುತ್ತದೆ ಎಂದರೆ ನಾನು ಆ ದಾಖಲೆಗಳನ್ನು ನೋಡಿಲ್ಲ.

4. ವಕೀಲರ ಮೂಲಕ ಹೋದ ನೋಟೀಸು ಏನೆಂದು ಷರಾ ಬಂದಿದೆ ಎಂದರೆ ಊರಲ್ಲಿ ಇರುವುದಿಲ್ಲ ಎಂದು ಬಂದಿದೆ. ಆರೋಪಿಯ ಚಿಕ್ಕವಯಸ್ಸಿನಿಂದ ದೊಡ್ಡಗಂಜೂರಿನಲ್ಲಿ ವಾಸವಿದ್ದಾಳೆ ಎಂದರೆ ಸರಿ. ದೊಡ್ಡಗಂಜೂರಿನಲ್ಲಿ ಪೋಸ್ಟ್ ಆಫೀಸು ಇದೆ ಎಂದರೆ ಸರಿ. ನಾನು ಮತ್ತು ನನ್ನ ದೊಡ್ಡಪ್ಪ ಕೃಷ್ಣಾರೆಡ್ಡಿ ಸೇರಿ ಷರಾ ಬರೆಸಿರುತ್ತೇವೆ ಎಂದರೆ ಸುಳ್ಳು. ನಾನು ಕಳುಹಿಸಿದ ನೋಟೀಸು ಆರೋಪಿಗೆ ಇದುವರೆಗೂ ತಲುಪಿಲ್ಲ ಎಂದರೆ ನಾನು ಕಳುಹಿಸಿದ್ದೇನೆ ಆರೋಪಿ ತೆಗೆದುಕೊಂಡಿದ್ದರೋ ಇಲ್ಲವೋ ನನ್ನ ಗೊತ್ತಿಲ್ಲ ಎನ್ನುತ್ತಾರೆ. ನನ್ನ ವಕೀಲರು ನೋಟೀಸು ಊರಲ್ಲಿ ಇಲ್ಲ ಎಂದು ವಾಪಸ್ಸು ಬಂದಿದೆ ಆಗ ನಾನು ಆರೋಪಿಯದ್ದು ಇದೇ ಊರು ಎಂದು ತಿಳಿಸಿದ್ದೇನೆ ಎಂದರೆ ಸರಿ.

5. ಚೆಕ್ ನಲ್ಲಿ ಇರುವ ಬರವಣಿಗೆ ಆರೋಪಿಯದ್ದು ಅಲ್ಲ ಎಂದರೆ ಸಾಕ್ಷಿಯು ಆರೋಪಿಯೇ ಬರೆದುಕೊಂಡು ಬಂದು ನನಗೆ ನೀಡಿದ್ದು ಎನ್ನುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು**–

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.